O.S .No.234/2020
PW-1

ದಿನಾಂಕ: 20.04.2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

ಪಾಟೀ ಸವಾಲು **3** ನೇ ಪ್ರತಿವಾದಿ ಪರ ಶ್ರೀ ಪಿ.ಎಂ.ಎನ್. ವಕೀಲರಿಂದ

ನನ್ನ ತಂದೆ ಜವರೇಗೌಡರಿಗೆ 6 ಜನ ಮಕ್ಕಳು. ಅವರುಗಳೆಂದರೆ ಲಕ್ಷ್ಮಮ್ಮ, ರತ್ನಮ್ಮ, ಕಾಂತಮ್ಮ, ಪ್ರೇಮ, ವೆಂಕಟೇಶ ಮತ್ತು ಸುರೇಶ ಎಂದು ಹೇಳುತ್ತಾರೆ. ನಿಮ್ಮ ತಂದೆಗೆ 6 ಜನ ಮಕ್ಕಳು ಎಂದು ತೋರಿಸಲು ನ್ಯಾಯಾಲಯಕ್ಕೆ ವಂಶವೃಕ್ಷ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಕೊಟ್ಟಿದ್ದೇನೆ ಎಂದು ಹೇಳುತ್ತಾರೆ. ಪುಟ್ಟಮ್ಮ ಎಂದರೆ ಯಾರು ಎಂದರೆ ಸಾಕ್ಷಿ ನನ್ನ ತಂಗಿಯಾಗಬೇಕು, ಅವರು 35 ವರ್ಷಗಳ ಹಿಂದೆ ಎರಡು ಮಕ್ಕಳನ್ನು ಬಿಟ್ಟು ಹೊರಟು ಹೋಗಿರುತ್ತಾರೆ ಎಂದು ಹೇಳುತ್ತಾರೆ. ಸದರಿ ಪುಟ್ಟಮ್ಮನನ್ನು ಹೊಸಹಳ್ಳಿಯ ಅಕ್ಕನ ಮೈದುನನಿಗೆ ಮದುವೆ ಮಾಡಿ ಕೊಡಲಾಗಿತ್ತು. ಸದರಿ ಪುಟ್ಟಮ್ಮನನ್ನು ದಾವೆಯಲ್ಲಿ ಪಕ್ಷಗಾರರಾಗಿ ಮಾಡಿಲ್ಲ ಎಂದರೆ ಸಾಕ್ಷಿ ಬಿಟ್ಟು ಹೋಗಿದ್ದರಿಂದ ಮಾಡಿಲ್ಲ ಎಂದು ಹೇಳುತ್ತಾರೆ. ನ್ಯಾಯಾಲಯಕ್ಕೆ ಸತ್ಯಾಂಶ ಗೊತ್ತಾಗುತ್ತದೆಂಬ ಕಾರಣಕ್ಕಾಗಿ ವಂಶವೃಕ್ಷವನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

ನನ್ನ ಮದುವೆಯಾಗಿ ಈಗ್ಗೆ 43 ವರ್ಷಗಳಾಗಿದೆ. ನೀವು ಮತ್ತು ನಿಮ್ಮ ಅಕ್ಕ-ತಂಗಿಯರು ಮದುವೆಯಾದ ನಂತರ ಅವರ ಗಂಡನ ಮನೆಯಲ್ಲೇ ವಾಸ ಮಾಡಿಕೊಂಡು, ಜಮೀನು ಉಳುಮೆ ಮಾಡಿಕೊಂಡು ಇದ್ದೀರಿ ಎಂದರೆ ಸರಿ. ನಿಮ್ಮಗಳ ಮದುವೆ ನಿಮ್ಮ ತಂದೆ ಬದುಕಿರುವಾಗಲೇ ಆಗಿತ್ತು ಎಂದರೆ ಸರಿ. 1 ನೇ ಪ್ರತಿವಾದಿ ಡಿ ದರ್ಜೆಯ ನೌಕರನಾಗಿದ್ದಾನೆ. 2 ನೇ ಪ್ರತಿವಾದಿ ವ್ಯವಸಾಯ ಮಾಡಿಕೊಂಡು, ಊರಿನಲ್ಲೇ ಇದ್ದಾರಾ ಎಂದರೆ ಸಾಕ್ಷಿ ಕೂಲಿ ಮಾಡಿಕೊಂಡು ಇದ್ದಾರೆ ಎಂದು ಹೇಳುತ್ತಾರೆ. 1 ಮತ್ತು 2 ನೇ ಪ್ರತಿವಾದಿಗಳು ಒಂದೇ ಊರಿನಲ್ಲಿ ಬೇರೆ ಬೇರೆ ಮನೆಗಳಲ್ಲಿ ವಾಸ ಇದ್ದಾರೆಂದರೆ ಸರಿ. ನಿಮ್ಮ ತಂದೆ-ತಾಯಿ ಬದುಕಿದ್ದ ಮನೆ ಈಗ ಯಾರ ವಶದಲ್ಲಿದೆ ಎಂದರೆ ಸಾಕ್ಷಿ 1 ನೇ ಪ್ರತಿವಾದಿ ವಶದಲ್ಲಿದೆ ಎಂದು ಹೇಳುತ್ತಾರೆ. 1 ನೇ ಪ್ರತಿವಾದಿ ವಾಸ ಇರುವ ಮನೆಯನ್ನು ದಾವೆಯಲ್ಲಿ ಭಾಗಾಂಶ ಕೋರಿಲ್ಲ ಎಂದರೆ ಸಾಕ್ಷಿ ಇಲ್ಲ, ಚಿಕ್ಕದ್ದು ಎಂದು ಹೇಳುತ್ತಾರೆ. 2 ನೇ ಪ್ರತಿವಾದಿ ವಾಸ ಇರುವ ಮನೆ ನಿಮ್ಮ ತಂದೆ ಬದುಕಿದ್ದಾಗ ತೆಗೆದುಕೊಂಡ ಆಸ್ತಿ ಎಂದರೆ ಸರಿಯಲ್ಲ. ಅವರು ಬೇರೆ ಇದ್ದಾರೆ ಎಂದು ಹೇಳುತ್ತಾರೆ.

ನಿಮ್ಮ ತಂದೆ ಮೃತಪಟ್ಟ ನಂತರ ನಿಮ್ಮ ತಾಯಿ ಬಸಮ್ಮ ದಾವಾ ಆಸ್ತಿಯ ಮಾಲೀಕರಾಗಿದ್ದರು ಎಂದರೆ ಸರಿ. ನಿಮ್ಮ ತಾಯಿಯೇ ಕುಟುಂಬದ ಯಜಮಾನಿಕೆ ಮಾಡುತ್ತಿದ್ದರು ಎಂದರೆ ಸರಿ. ದಾವಾ ಆಸ್ತಿಯೂ ಸಹ ನಿಮ್ಮ ತಾಯಿಯ ಅಧಿನದಲ್ಲಿತ್ತು ಎಂದರೆ ಸರಿ. ದಾವಾ ಆಸ್ತಿಯೂ ನಿಮ್ಮ ತಾಯಿಯ ಅಧಿನದಲ್ಲಿ ಇದ್ದುದ್ದರಿಂದ ಮಾರಾಟ ಮಾಡುವ ಸಂಪೂರ್ಣ ಹಕ್ಕು ಇತ್ತು ಎಂದರೆ ಸಾಕ್ಷಿ ಗೊತ್ತಿಲ್ಲ  ಎಂದು ಹೇಳುತ್ತಾರೆ. ದಾವಾ ಆಸ್ತಿಯ ಇಂದಿನವರೆಗೂ ನಿಮಗಾಗಲೀ, ನಿಮ್ಮ ಅಣ್ಣ-ತಮ್ಮಂದಿರ ಹೆಸರಿಗಾಗಲೀ ಖಾತೆಯಾಗಿಲ್ಲ ಎಂದರೆ ಸಾಕ್ಷಿ 1 ನೇ  ಪ್ರತಿವಾದಿಯ ಹೆಸರಿಗೆ ಆಗಿದೆ  ಎಂದು ಹೇಳುತ್ತಾರೆ. ದಾವಾ ಆಸ್ತಿಗೆ ಸಂಬಂಧಿಸಿದ ಕಂದಾಯ ಪಾವತಿಸಿದ ಬಗ್ಗೆ ರಶೀದಿಯನ್ನು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ಮಾಡಿದ್ದೇನೆ  ಎಂದು ಹೇಳುತ್ತಾರೆ.

ದಾವೆ ಹೂಡಲು ಮಾಹಿತಿಯನ್ನು ಯಾರು ಹೇಳಿ ಬರೆಸಿದ್ದು ಎಂದರೆ ಸಾಕ್ಷಿ ನಮ್ಮ ಊರಿನವರು ಹೇಳಿ ಬರೆಸಿದ್ದು  ಎಂದು ಹೇಳುತ್ತಾರೆ. ನ್ಯಾಯಾಲಯಕ್ಕೆ ಸಲ್ಲಿಸಿದ ದಾಖಲಾತಿಗಳನ್ನು ಯಾರು ಕೊಟ್ಟಿದ್ದು ಎಂದರೆ ಸಾಕ್ಷಿ ನಮ್ಮ ಊರಿನವರೇ  ಎಂದು ಹೇಳುತ್ತಾರೆ.  ನ್ಯಾಯಾಲಯಕ್ಕೆ ಸಲ್ಲಿಸಿದ ದಾಖಲಾತಿಗಳನ್ನು ಏಲ್ಲಿಂದ ಪಡೆದುಕೊಂಡರು ಎಂದರೆ ಸಾಕ್ಷಿ ನಾನು ಓದಿಲ್ಲದೇ ಇರುವುದರಿಂದ ಗೊತ್ತಿಲ್ಲ  ಎಂದು ಹೇಳುತ್ತಾರೆ. ನ್ಯಾಯಾಲಯಕ್ಕೆ ಸಲ್ಲಿಸಿದ ದಾಖಲಾತಿಗಳನ್ನು ಯಾವಾಗ ಪಡೆದರು ಎಂದು ಗೊತ್ತಾ ಎಂದರೆ ಸಾಕ್ಷಿ ಗೊತ್ತಿಲ್ಲ  ಎಂದು ಹೇಳುತ್ತಾರೆ. ಮದುವೆಯಾದ ನಂತರ ಪಡಿತರ ಚೀಟಿಯಾಗಲೀ, ಚುನಾವಣಾ ಗುರುತಿನ ಚೀಟಿಯ ವಿಳಾಸ ನಿಮ್ಮ ಗಂಡನ ಊರಿನದ್ದೇ ಆಗಿದೆ  ಎಂದರೆ  ಸರಿಯಲ್ಲ. ನಿಮ್ಮ ತಂದೆ ಊರಿಗೆ ಹಬ್ಬ ಹರಿದಿನಗಳಿಗೆ ಬಂದು ಹೋಗುತ್ತೀರಾ ಎಂದರೆ ಸಾಕ್ಷಿ ನನ್ನ ಅಣ್ಣ-ತಮ್ಮಂದಿರು ಕರೆದು ಉಪಚರಿಸುವುದಿಲ್ಲ, ಹಾಗಾಗಿ ಬರುವುದಿಲ್ಲ  ಎಂದು ಹೇಳುತ್ತಾರೆ. ನಿಮ್ಮ ತಂದೆ-ತಾಯಿ ಬದುಕಿದ್ದಾಗ ಊರಿಗೆ ಹೋಗುತ್ತಿದ್ದೀರಿ, ಈಗ ಹೋಗುವುದಿಲ್ಲ ಎಂದರೆ ಸಾಕ್ಷಿ ಕರೆಯುವುದಿಲ್ಲ, ಹಾಗಾಗಿ ಹೋಗುವುದಿಲ್ಲ  ಎಂದು ಹೇಳುತ್ತಾರೆ.

ದಾವೆ ಹೂಡುವ ಕಾಲಕ್ಕೆ ನಿಮ್ಮ ಅಣ್ಣ-ತಮ್ಮಂದಿರ ಜೊತೆ ಮಾತನಾಡಿಕೊಂಡು ಹೂಡಿದ್ದೀರಾ ಎಂದರೆ ಸಾಕ್ಷಿ ಅವರಿಗೆ ಗೊತ್ತೆ ಇಲ್ಲ  ಎಂದು ಹೇಳುತ್ತಾರೆ. ದಾವಾ ಆಸ್ತಿ ಯಾರ ಹೆಸರಿಗೆ ಇದೆ ಎಂದರೆ ಸಾಕ್ಷಿ ನನ್ನ ತಂದೆಯ ಹೆಸರಿಗೆ  ಎಂದು ಹೇಳುತ್ತಾರೆ. 3 ನೇ ಪ್ರತಿವಾದಿ ಯಾರು ಎಂದರೆ ಸಾಕ್ಷಿ ಅವರು ಆಸ್ತಿ ತೆಗೆದುಕೊಂಡವರು  ಎಂದು ಹೇಳುತ್ತಾರೆ. 3 ನೇ  ಪ್ರತಿವಾದಿ ಯಾವಾಗ ಆಸ್ತಿ ತೆಗೆದುಕೊಂಡರು ಎಂದರೆ ಸಾಕ್ಷಿ ಗೊತ್ತಿಲ್ಲ  ಎಂದು

ಹೇಳುತ್ತಾರೆ.

ದಾವೆ ಹೂಡುವ ಕಾಲಕ್ಕೆ ವಾದ ಪತ್ರಕ್ಕೆ ನೀವೊಬ್ಬರೇ ಸಹಿ ಮಾಡಿದ್ದೀರಾ ಎಂದರೆ ಸಾಕ್ಷಿ 4 ಜನ ಮಾಡಿದ್ದೇವೆ ಎಂದು ಹೇಳುತ್ತಾರೆ. ವಾದ ಪತ್ರವನ್ನು ಎಲ್ಲಿ ಸಹಿ ಮಾಡಿದ್ದೀರಿ ಎಂದರೆ ಸಾಕ್ಷಿ ಬರೆಸಿದವರು ನಮ್ಮ ಮನೆಯ ಬಳಿ ಕರೆಸಿಕೊಂಡು, 4 ಜನರ ಸಹಿ ಪಡೆದಿರುತ್ತಾರೆ ಎಂದು ಹೇಳುತ್ತಾರೆ.

ನಿಮ್ಮ ತಂದೆ-ತಾಯಿ ದಾವಾ ಆಸ್ತಿಯಲ್ಲಿ ಬದುಕಿದ್ದಾಗ ಏನು ಬೆಳೆ ಬೆಳೆಯುತ್ತಿದ್ದರೆ ಎಂದರೆ ಸಾಕ್ಷಿ ರಾಗಿ, ಜೋಳ ಮತ್ತು ಕಾಳು ಎಂದು ಹೇಳುತ್ತಾರೆ. 3 ನೇ ಪ್ರತಿವಾದಿ ದಾವಾ ಆಸ್ತಿಯಲ್ಲಿ ಏನು ಬೆಳೆ ಬೆಳೆಯುತ್ತಿದ್ದಾರೆ ಎಂದರೆ ಸಾಕ್ಷಿ ಏನು ಬೆಳೆಯುತ್ತಿಲ್ಲ ಎಂದು ಹೇಳುತ್ತಾರೆ. 3 ನೇ ಪ್ರತಿವಾದಿ ಮೊದಲು ಏನು ಬೆಳೆ ಬೆಳೆಯುತ್ತಿದ್ದರು ಎಂದರೆ ಸಾಕ್ಷಿ ರಾಗಿ, ಜೋಳ ಎಂದು ಹೇಳುತ್ತಾರೆ. ಸಾಕ್ಷಿ ಮುಂದುವರೆದು ಅವರು ಬೆಳೆಯುತ್ತಿದ್ದರೋ, ಇಲ್ಲವೋ ಗೊತ್ತಿಲ್ಲ ಎಂದು ಹೇಳುತ್ತಾರೆ. 3 ನೇ ಪ್ರತಿವಾದಿ ಖರೀದಿ ಮಾಡಿದ ನಂತರ ನೀವೇನು ಜಮೀನು ಬಳಿ ಹೋಗಿಲ್ಲ ಎಂದರೆ ಸಾಕ್ಷಿ ನನ್ನ ಅಣ್ಣ-ತಮ್ಮಂದಿರು ಮಾಡುತ್ತಿದ್ದಾರೆಂದುಕೊಂಡಿದ್ದೇವು, ನಮಗೆ ಗೊತ್ತಿಲ್ಲ ಎಂದು ಹೇಳುತ್ತಾರೆ.

3 ನೇ ಪ್ರತಿವಾದಿ ನಿಮ್ಮ ಸಂಬಂಧಿಯಾಗಬೇಕು ಎಂದರೆ ಸರಿ. 3 ನೇ ಪ್ರತಿವಾದಿಯ ಮನೆಯವರು ಹಾಗೂ ನೀವು ಚೆನ್ನಾಗಿದ್ದೀರಿ ಎಂದರೆ ಸಾಕ್ಷಿ ಅವರು ನಮಗೆ ಮಾತನಾಡಲು ಸಿಕ್ಕಿಲ್ಲ ಎಂದು ಹೇಳುತ್ತಾರೆ. 20-30 ವರ್ಷಗಳ ಹಿಂದೆ 3 ನೇ ಪ್ರತಿವಾದಿಯ ಮನೆಯವರು ಹಾಗೂ ನೀವು ಚೆನ್ನಾಗಿದ್ದೀರಿ ಎಂದರೆ ಸಾಕ್ಷಿ ಅವಾಗ ಎಲ್ಲ ಚೆನ್ನಾಗಿದ್ದೇವು ಎಂದು ಹೇಳುತ್ತಾರೆ. 3 ನೇ ಪ್ರತಿವಾದಿ ಹೆಂಡತಿ ನಿಮ್ಮ ಚಿಕ್ಕಪ್ಪನ ಮಗಳು ಎಂದರೆ ಸರಿ.

ನಿಪಿ-6 ನ್ನು ನಿಮ್ಮ ತಾಯಿ ಬಸಮ್ಮ 3 ನೇ ಪ್ರತಿವಾದಿಗೆ 2006 ರಲ್ಲಿ ಬರೆದುಕೊಟ್ಟ ಕ್ರಯ ಪತ್ರ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ. ದಾವೆಯನ್ನು ಯಾವ ಕಾರಣಕ್ಕಾಗಿ ಹೂಡಿದ್ದೀರಾ ಎಂದರೆ ಸಾಕ್ಷಿ ನನ್ನ ತಂದೆಯ ಆಸ್ತಿಯಲ್ಲಿ ಭಾಗ ಬರಬೇಕೆಂದು ಹೂಡಿರುತ್ತೇವೆ ಎಂದು ಹೇಳುತ್ತಾರೆ. ದಾವಾ ಆಸ್ತಿಯ ಚೆಕ್ಕುಬಂಧಿಃಪೂರ್ವಕ್ಕೆಃ ಚಿಕ್ಕನಾಯಕ, ಪಶ್ಚಿಮಕ್ಕೆಃ ಸಾಕಮ್ಮ ಮತ್ತು ದಕ್ಷಿಣಕ್ಕೆಃ ಗಿರೀಗೌಡ. ದಾವಾ ಆಸ್ತಿ ಎಷ್ಟು ವಿಸ್ತೀರ್ಣ ಇದೆ ಎಂದರೆ ಸಾಕ್ಷಿ 1 ಎಕರೆ 16 ಗುಂಟೆ ಎಂದು ಹೇಳುತ್ತಾರೆ. 3 ನೇ ಪ್ರತಿವಾದಿಯ ಹೆಸರಿಗಾದ ಖಾತೆಯನ್ನು ಯಾವುದೇ ಪ್ರಾಧಿಕಾರದ ಮುಂದೆ ಪ್ರಶ್ನೆ ಮಾಡಿಲ್ಲ ಎಂದರೆ ಸರಿ.

ದಾವೆ ಹೂಡಿದರೆ 3 ನೇ ಪ್ರತಿವಾದಿ ರಾಜಿ ಮಾಡಿಕೊಂಡಿರುತ್ತಾರೆ, ಅವರಿಂದ ಹಣ ಪಡೆಯಬಹುದು ಎಂಬ ಕಾರಣಕ್ಕಾಗಿ ಹೂಡಿರುತ್ತೀರಿ ಎಂದರೆ ಸಾಕ್ಷಿ ತಂದೆಯ ಆಸ್ತಿಯಲ್ಲಿ ಭಾಗ ಬೇಕು ಎಂದು ಹೇಳುತ್ತಾರೆ. ದಾವಾ ಆಸ್ತಿ ಪ್ರಸ್ತುತ ಎಷ್ಟು ಬೆಲೆ ಬಾಳುತ್ತದೆಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ.

**( ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದರಿಂದ, ಆಲಿಸಿ ಅನುಮತಿಸಲಾಯಿತು.)**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹುಣಸೂರು.